**ದಿನಾಂಕಃ 26-03-2026** ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ಹೆಚ್.ವಿ. ವಕೀಲ ರಿಂದಃ**

ನಾನು ನನ್ನ ಮುಖ್ಯ ವಿಚಾರಣೆ ಬದಲಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ತಿಳಿದುಕೊಂಡು ಸರಿ ಇರುತ್ತದೆ ಎಂದು ಒಪ್ಪಿ- ಸಹಿ ಮಾಡಿರುತ್ತೇನೆ.

1. ಸಾಕ್ಷಿಯು Case Sheet ನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿಪಿ-58 ಎಂದು** ಗುರುತಿಸಲಾಯಿತು.
2. ಸಾಕ್ಷಿಯು OPD Book ವರದಿಯನ್ನು ಹಾಜರುಪಡಿಸುತ್ತಿದ್ದು, ಅದನ್ನು **ನಿಪಿ-59 ಎಂದು** ಗುರುತಿಸಲಾಯಿತು.
3. ಸಾಕ್ಷಿಯು 3 X-ray Report ಗಳನ್ನು ಹಾಜರುಪಡಿಸುತ್ತಿದ್ದು, ಅವನ್ನು **ನಿಪಿ-60 ರಿಂದ ನಿಪಿ-62 ಎಂದು** ಗುರುತಿಸಲಾಯಿತು.

(ಗಾಯಾಳುವಿಗೆ ಒಟ್ಟಾರೆ ದೇಹದ ಶೇ.8 ರಷ್ಟು ನ್ಯೂನ್ಯತೆ ಇರುತ್ತದೆ.)

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀಮತಿ.ಬಿ.ಟಿ.ಎಲ್. ವಕೀಲರಿಂದಃ**

ನಾನು ರಕ್ಷಿತ ರವರ ಗಾಯದ ಪ್ರಮಾಣ ಪತ್ರ ಕೊಟ್ಟಿಲ್ಲ. ನಾನು ರಕ್ಷಿತರವರಿಗೆ ಶಸ್ತ್ರ ಚಿಕಿತ್ಸೆ ಮಾಡಿಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ದಾಖಲಾತಿಗಳ ಆಧಾರದ ಮೇಲೆ ಸಾಕ್ಷಿ ಹೇಳಿರುತ್ತೇನೆ, ಸಾಕ್ಷಿ ಮುಂದುವರೆದು ನಾನು ರಕ್ಷಿತರವರಿಗೆ ಚಿಕಿತ್ಸೆ ಕೊಟ್ಟಿರುತ್ತೇನೆ. ನಾನು ರಕ್ಷಿತರವರಿಗೆ ಯಾವುದೇ ಶಸ್ತ್ರ ಚಿಕಿತ್ಸೆ ಮಾಡದೇ ಇರುವುದರಿಂದ ನ್ಯೂನ್ಯತೆ ಬಗ್ಗೆ ಹೇಳಲು ಬರುವುದಿಲ್ಲ ಎಂದರೆ ಚಿಕಿತ್ಸೆ ಕೊಟ್ಟಿರುತ್ತೇನೆ. ಗಾಯಾಳು ರಕ್ಷಿತರವರು ದಿಃ05-03-2026 ರಂದು ಮತ್ತು ಮೊದಲು ನಾಲ್ಕು ದಿನಗಳ ಕಾಲ ಒಳ ರೋಗಿಯಾಗಿರುವಾಗ ಬಿಟ್ಟರೆ ಬೇರೆ ದಿನ ನನ್ನ ಬಳಿ ಚಿಕಿತ್ಸೆಗೆ ಬಂದಿರುವುದಿಲ್ಲ. 2024 ರಂದು ಗಾಯಾಳು ರಕ್ಷಿತ ಆಸ್ಪತ್ರೆಯಿಂದ ಚಿಕಿತ್ಸೆ ಪಡೆದುಕೊಂಡು ಹೋದ ನಂತರ 2026 ರಲ್ಲಿ ಚಿಕಿತ್ಸೆ ಕೊಟ್ಟಿರುತ್ತೇನೆ. ನಾನು ಗಾಯಾಳುವನ್ನು ನೋಡದೇ ಇರುವುದರಿಂದ

ನ್ಯೂನ್ಯತೆ ಬಗ್ಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುವ ಗಾಯಾಳುವಿನ ನ್ಯೂನ್ಯತೆ ಸುಳ್ಳು ಎಂದರೆ ಸರಿಯಲ್ಲ. ನಾನು X-Ray report ಜೊತೆಗೆ ತಜ್ಞರ ವರದಿ ಕೊಟ್ಟಿಲ್ಲ. ನಾನು ಗಾಯಾಳು ರಕ್ಷಿತ ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.58 ರಿಂದ 62 ರ ದಾಖಲೆಗಳನ್ನು ಸೃಷ್ಠಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಗಾಯಾಳುವಿಗೆ ಹಾಲಿ ಗಾಯ ಕೂಡಿಕೊಂಡಿರುತ್ತದೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಪರ ಹಿ.ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ಶಿರಾ.